# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಹತ್ತಿರ, ಬೆಂಗಳೂರು**

ಸಂಖ್ಯೆ:ಸ.ಇಂ/ವಾ–119/ವಾರ್ಡ್ ಸಭೆ/2020–21

ದಿನಾಂಕ:16/01/2021

## ವಾರ್ಡ್ –119ರ ವಾರ್ಡ್ ಸಭೆಯ ನಡವಳಿ

ದಿನಾಂಕ:16/01/2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :–**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್–119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್–119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್–119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್–119.
5. ಶ್ರೀ. ಸಂಪತ್, ಮೀಟರ್ ರೀಡರ್ BWSSB
6. ಶ್ರೀ. ಗಂಗಾ, ಪಿ.ಎಸ್.ಐ ಪೋಲೀಸ್ ಇಲಾಖೆ,
7. ಶ್ರೀ. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.
8. ಶ್ರೀ. ಸಂಪತ್, ವಾಟರ್ ಮ್ಯಾನ್

**ಹಾಜರಿದ್ದ ಸ್ಥಳೀಯರು :–**

1. ಶ್ರೀ. ಗೋಪಿ.
2. ಶ್ರೀ. ಸಲ್ಮಾನ್
3. ಶ್ರೀ. ಮುರಳೀಧರನ್
4. ಶ್ರೀ. ಚಂದ್ರಕಾಂತ್

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

## ಚರ್ಚಿಸಲಾದ ವಿಷಯಗಳು:-

### 1. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ನಿಗಧಿತ ಸಮಯಕ್ಕೆ ಕಸ ಸ್ವೀಕರಿಸುವ ಆಟೋಗಳು ಹಾಗೂ ಕಸ ವಿಲೇವಾರಿ ಲಾರಿಗಳು ಹಾಜರಾಗದೆ ಇರುವ ಬಗ್ಗೆ ತಿಳಿಸಿದರು. ಹಾಗೂ ಆಟೋ ಚಾಲಕರು ವಿಜಿಲ್ ಬಳಸುವಂತೆ ಸೂಚನೆ ನೀಡಿದರು.

ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಸುರೇಶ್ ರವರು ಈ ಬಗ್ಗೆ ಕೂಡಲೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

### 2. ಬೆಸ್ಕಾಂ ವಿಭಾಗ:-

ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ ಶ್ರೀ. ರಾಜೇಶ್ ಸಹಾಯಕ ಅಭಿಯಂತರವರಿಗೆ ಬೆಸ್ಕಾಂ ಸಂಬಂಧಪಟ್ಟಂತೆ ಯಾವುದೇ ರಸ್ತೆ ಅಗೆತ ಮಾಡುವ ಮುಂಚೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ನಂತರವೇ ರಸ್ತೆ ಅಗೆತದ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಸೂಚನೆ ನೀಡಲಾಯಿತು.

### 3. ಕಾಮಗಾರಿ ವಿಭಾಗ:-

ಧರ್ಮರಾಯಸ್ವಾಮಿ ವಾರ್ಡಿಗೆ ಸಂಬಂಧಪಟ್ಟಂತೆ, ಕಲಾಸಿಪಾಳ್ಯ ವ್ಯಾಪ್ತಿಯಲ್ಲಿರುವ ಶರ್ಮಾ ಟ್ರಾನ್ಸ್‌ಪೋರ್ಟ್ ಮತ್ತು ನ್ಯಾಷನಲ್ ಟ್ರಾನ್ಸ್‌ಪೋರ್ಟ್ ಮುಂದೆ ಪಾದಚಾರಿ ಮಾರ್ಗ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಮಾತನಾಡಿ ಕೂಡಲೇ ಪಾದಚಾರಿ ಮಾರ್ಗ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಧರ್ಮರಾಯಸ್ವಾಮಿ ವಾರ್ಡಿಗೆ ಸಂಬಂಧಪಟ್ಟಂತೆ, ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೆ ಇರುವ ನಾಮಫಲಕಗಳಲ್ಲಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಶಾಸಕರ ಮೊಬೈಲ್ ಸಂಖ್ಯೆ ನಮೂದಿಸಬೇಕೆಂದು ಸಾರ್ವಜನಿಕರು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ಪಾಲಿಕೆಯ ನಿಯಮಾನುಸಾರ ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

### 4. ಸಂಚಾರಿ ಪೊಲೀಸ್ ಇಲಾಖೆ:-

ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಹಾಗೂ ಎನ್.ಆರ್ ರಸ್ತೆಯ ಸುತ್ತಮುತ್ತಲಲ್ಲಿ ಅನಧಿಕೃತವಾಗಿ ವಾಹನಗಳು ನಿಂತಿದ್ದು, ಅವುಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಮು.ತಿ.ನೋ..

ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ. ಗಂಗಾ ಪಿ.ಎಸ್.ಐ ರವರು ಈ ಬಗ್ಗೆ ಕ್ರಮ ವಹಿಸಿ ಅತಿ ಶೀಘ್ರವಾಗಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸಂಚಾರಿ ವಿಭಾಗ ಪೋಲೀಸ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಲೈನ್ ಡಿವೈಡರ್ ಪೈಂಟಿಂಗ್ ಅಳವಡಿಸಬೇಕೆಂದು ಕೋರಿದರು. ಈ ಬಗ್ಗೆ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ ರವರಿಗೆ ಪತ್ರ ಬರೆಯುವಂತೆ ಅಧ್ಯಕ್ಷರು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

## 5. ವಿದ್ಯುತ್ ವಿಭಾಗ (ದಕ್ಷಿಣ):-

ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನಲ್ಲಿ ಹಲವಾರು ಕಡೆಗಳಲ್ಲಿ ಹಾಗೂ ದಾಸಪ್ಪ ಆಸ್ಪತ್ರೆಯ ಕಾಂಪೌಂಡ್‌ನಲ್ಲಿ ಬೀದಿ ದೀಪದ ಸಮಸ್ಯೆ ಇರುವುದಾಗಿ ಸಾರ್ವಜನಿಕರು ಕೋರಿದರು. ಆದರೆ ಈ ಸಭೆಯಲ್ಲಿ ವಿದ್ಯುತ್ ವಿಭಾಗ (ದಕ್ಷಿಣ) ರವರು ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮವಹಿಸಲು ಶೀಘ್ರವಾಗಿ ವಿದ್ಯುತ್ ವಿಭಾಗ (ದಕ್ಷಿಣ) ರವರಿಗೆ ಪತ್ರ ಬರೆಯುವಂತೆ ಅಧ್ಯಕ್ಷರು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

ವಾರ್ಡ್ ಪ್ರದೇಶಗಳಲ್ಲಿ ಅನಧಿಕೃತವಾಗಿ ಪೆಟ್ಟಿ ಅಂಗಡಿಗಳನ್ನು ಇಡುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಯಿತು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಗೈರುಹಾಜರಾದ ಅಧಿಕಾರಿಗಳಿಗೆ ಎಚ್ಚರಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಎಚ್ಚರಿಸಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್‌ಕುಮಾರ್ ಎನ್)
ಕಾರ್ಯದರ್ಶಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ

(ಡಿ.ಕೆ. ಮಧುಸೂದನ್)
ನೋಡಲ್ ಅಧಿಕಾರಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ